OS No.93/2018

ಪಿ. ಡಬ್ಲ್ಯೂ- 1

(ಇಂದು ದಿಃ 19-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದು ವರೆದ ಪಾಟೀ ಸವಾಲು ಶ್ರೀ **MSH** ವಕೀಲರಿಂದಃ

ನಿಪಿ-15 ರಿಂದ 57 ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಯಿಂದ ದಾಖಲಾತಿಗಳನ್ನು 2018 ರಲ್ಲಿ ಪಡೆದುಕೊಂಡಿದ್ದೆ. ಕಾರಣ ಸದರಿ ದಾಖಲಾತಿಗಳನ್ನು ವಾದಿ ಪತ್ರದೊಂದಿಗೆ ಹಾಜರು ಪಡಿಸಬಹುದಿತ್ತು ಎಂದರೆ ಎಲ್ಲವನ್ನು ತಿಳಿದುಕೊಂಡು ಸಲ್ಲಿಸಬೇಕು ಎಂದು ವಿಳಂಬ ಮಾಡಿ ಸಲ್ಲಿಸಿದ್ದೇನೆ. ನಿಪಿ-15 ಮತ್ತು 21 ಖರೀದಿ ಪತ್ರಗಳ ಅಡಿ 4 ಮತ್ತು 2 ನೇ ಪ್ರತಿವಾದಿಯರು ಆಸ್ತಿ ಗಳನ್ನು ಸ್ವಯಾರ್ಜಿತವಾಗಿ ಸ್ವಂತ ಹಣದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ ಅವರೇ ಸದರಿ ಸ್ವತ್ತುಗಳ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಜಮೀನುಗಳ ಖರೀದಿ ಪತ್ರ ಆಗಬೇಕಾದರೆ ಜಮೀನಿನ ಸರ್ವೇ ಮಾಡುತ್ತಾರೆ ಎಂದರೆ ಮುಂಚೆ ಸರ್ವೇ ಮಾಡುತ್ತಿರಲಿಲ್ಲ ಇತ್ತಿಚಿಗೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ನಿಪಿ-16 ರಿಂದ 20 ಕ್ರಯ ಪತ್ರಗಳ ಜೋತೆ11 ಇ ಸ್ಕೆಚ್ ಗಳು ಇವೆ ಎಂದರೆ ಸರಿ. 11 ಇ ಸ್ಕೇಚಗಳನ್ನು ತಯಾರಿಸುವ ಕಾಲಕ್ಕೆ ನಾನು ತಕರಾರು ಮಾಡಿಲ್ಲ ಸಾಕ್ಷಿ ಮುಂದುವರೆದು ಸರ್ವೇ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-16 ರಿಂದ 20 ರ ಪ್ರಕಾರ ಖರೀದಿ ಮಾಡಿದವರು ಖರೀದಿ ಮಾಡಿದಾಗಿನಿಂದ ಇಲ್ಲಿಯ ವರೆಗೆ ಸದರಿ ಸ್ವತ್ತುಗಳ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. ನಿಪಿ-23 ರಿಂದ 57 ರ ದಾಖಲಾತಿಗಳಲ್ಲಿ ಬಸಲಿಂಗಮ್ಮ ರವರ ಹೆಸರು ಬರುತ್ತಿದ್ದು ಸದರಿ ಸ್ವತ್ತುಗಳಲ್ಲಿ ಅವರೇ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಬಸಲಿಂಗಮ್ಮ ನವರು ಹೆಸರಿನಲ್ಲಿರುವ ಕಂದಾಯ ದಾಖಲಾತಿಗಳನ್ನು ಈ ಮುಂಚೆ ನಾನು ಪ್ರಶ್ನೆ ಮಾಡಿರಲಿಲ್ಲ.

ದಾವೆಯಲ್ಲಿ ಒಟ್ಟು ಆಸ್ತಿ ಯ ಮಾರುಕಟ್ಟೆ ಮೌಲ್ಯವನ್ನು 10,04,466/- ಎಂದು ತೋರಿಸಿದ್ದೇನೆ ಎಂದರೆ ಸರಿ. ನಿಪಿ-15 ರಿಂದ 57 ದಾಖಲಾತಿಗಳನ್ನು ನನ್ನ ಪಾಟೀ ಸವಾಲು ಮುಗಿದ ನಂತರ ಉದ್ದೇಶ ಪೂರಕವಾಗಿ ವಿಳಂಬವಾಗಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಎಮ್.ಎ.ಸಿ.ಟಿ., ಸೇಡಂ